**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**

**C.C. - 439-25** **ಪಿಡಬ್ಲ್ಯೂಃ 7**
**ಸಿಡಬ್ಲ್ಯೂಃ 8**

ಸಾಕ್ಷಿದಾರರ ಹೆಸರು ಃ ಪ್ರಣವಕುಮಾರ ಜೈನ

ತಂದೆ ಹೆಸರು ಃ ಶುಕ್ಲಾಲಾಲಜಿ ಜೈನ

ವಯಸ್ಸು ಃ 34 ವರ್ಷ

ಉದ್ಯೋಗ ಃ ಖಾಸಗಿ ಕೆಲಸ

ವಾಸಸ್ಥಳ ಃ ತಿರುಪತಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 18.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಮೃತ ನಂದಾದೇವಿ ರವರು ನನ್ನ ತಾಯಿ. ದಿಃ 25.8.2024 ರಂದು ನಾವು ತಿರುಪತಿಯಿಂದ ಹುಬ್ಬಳ್ಳಿಗೆ ನಮ್ಮ ಸಂಬಂಧಿಕರ ಗೃಹ ಪ್ರವೇಶಕ್ಕೆ ಹುಬ್ಬಳ್ಳಿಗೆ ಬಂದಿದ್ದೆವು. ದಿಃ 26.8.2024 ರಂದು ಕಾರ್ಯಕ್ರಮ ಇತ್ತು. ದಿಃ 27.8.2024 ರಂದು ನನ್ನ ತಾಯಿ ಸುಮಾರು 9 ಗಂಟೆಗೆ ನಮ್ಮ ಅನಿತಾಳನ್ನು ರೇಲ್ವೆ ನಿಲ್ದಾಣಗೆ ಬಿಡಲು ಹೋಗಿದ್ದಳು. ನನ್ನ ತಾಯಿ ಅವರನ್ನು ಬಿಟ್ಟು ವಾಪಸ ಬಿ ಎಸ್ ಎನ್ ಎಲ್ ಕಚೇರಿ ಬಳಿ ರೋಡ ದಾಟುತ್ತಿದ್ದಾಗ ಅಪಘಾತ ವಾದ ಬಗ್ಗೆ ನಮ್ಮ ಚಿಕ್ಕಮ್ಮನ ಮಗ ಫೋನ್ ಮಾಡಿ ಹೇಳಿದರು. ವಿಷಯ ತಿಳಿದು ನಾನು ಹಾಗೂ ನನ್ನ ತಂದೆ ಹುಬ್ಬಳ್ಳಿಗೆ ಬಂದೆವು. ನನ್ನ ತಾಯಿಯನ್ನು ಹುಬ್ಬಳ್ಳಿಯ ಸುಚಿರಾಯು ಆಸ್ಪತ್ರೆಯಲ್ಲಿ ದಾಖಲ್ ಮಾಡಿದ್ದರು. ಚಿಕಿತ್ಸೆ ನಡೆಯುತ್ತಿತ್ತು. ಅವರಿಗೆ ಪ್ರಜ್ಞೆ ಬಂದ ನಂತರ ವಿಷಯ ಕೇಳಲಾಗಿ ನನ್ನ ತಾಯಿ ಆ ದಿನ ರೋಡ ದಾಟುತ್ತಿದ್ದಾಗ ಲಾರಿ ಅತಿ ವೇಗವಾಗಿ ನಿಯಂತ್ರಿಸಲಾಗದೇ ಬಂದು ಡಿಕ್ಕಿಪಡಿಸಿರುತ್ತದೆ ಎಂದು ನನ್ನ ತಾಯಿ ಹೇಳಿದಳು. ಈ ಕುರಿತು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ. ನನ್ನ ತಾಯಿ ಚಿಕಿತ್ಸೆ ಫಲಕಾರಿಯಾಗದೇ ದಿಃ 15.9.2024 ರಂದು ರಾತ್ರಿ 8.25 ಗಂಟೆಗೆ ಮರಣ ಹೊಂದಿದ್ದಾರೆ. ಶಬ್ಬಿರ ಎಂಬ ಲಾರಿ ಚಾಲಕನಿದ್ದನೆಂದು ದೂರುದಾರ ಹೇಳಿದ. ಗಾಡಿ ನಂಬರ ನೆನಪಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದರು, ಅವರ ಮನವಿಯನ್ನು ಪರಿಗಣಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಅಪಘಾತ ಪಡಿಸಿದ ವಾಹನ ನಂಃ ಕೆಎ-26 /ಎ -2672 ಅಂದರೆ ಗೊತ್ತಿಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ವಿ ಎಸ್, ವಕೀಲರಿಂದಃ**

ನಾವು ತಿರುಪತಿಯಿಂದ ಬಂದಾಗ ನಮ್ಮ ತಾಯಿಗೆ ಐ ಸಿ ಯೂ ಚಿಕಿತ್ಸೆ ನಡೆಯುತ್ತಿತ್ತು. ಐ ಸಿ ಯೂ ದಲ್ಲಿ ರೋಗಿ ಜೊತೆಗೆ ಬಹಳಷ್ಟು ಮಾತನಾಡಲು ಬಿಡುವುದಿಲ್ಲ ಅಂದರೆ ಸರಿ. ಐ ಸಿ ಯೂ ದಲ್ಲಿ ನೋಡಲು ಬಿಟ್ಟಿರಲಿಲ್ಲ. ಐ ಸಿ ಯೂ ದಿಂದ ನನ್ನ ತಾಯಿ ಹೊರಗಡೆ ಬಂದ ನಂತರ ಮಾತನಾಡಿದ್ದೇನೆ. ನಾನು ದಿಃ 28.8.2024 ರಂದು ನಮ್ಮ ತಾಯಿ ಜೊತೆ ಮಾತನಾಡಿದ್ದೇನೆ. ಆ ದಿನ ನನ್ನ ತಾಯಿ ಆರೋಪಿ ಹೆಸರು ಹಾಗೂ ವಾಹನ ನಂಬರ ಹೇಳಿದ್ದಳು. ನನಗೆ ನೆನಪಿಲ್ಲ. ಅಪಘಾತ ದ ಸ್ಥಳ ನೋಡಿದ್ದೇನೆ. ಜನಸಂದಣಿ ಪ್ರದೇಶವೆಂದರೆ ಸರಿ. ಗದಗ ಅಂಡರ ಬ್ರಿಜ್ ದಿಂದ ಎಡಗಡೆಗೆ ತಿರುವಿ ಬಲಗಡೆಗೆ ತಿರುಗಬೇಕೆಂದರೆ ಸರಿ. ನಾನು ವಾಹನ ಚಾಲನೆ ಮಾಡುತ್ತೇನೆ. ಯಾವುದೇ ವಾಹನ ವೇಗವಾಗಿ ಬರಲು ಸಾಧ್ಯವಿಲ್ಲ ಅಂದರೆ ಸರಿಯಲ್ಲ. ವಿಮೆಗೋಸ್ಕರ ದೂರಿನಲ್ಲಿ ಏನು ಬರೆದಿದ್ದಾರೆಂದು ನೋಡಿದ್ದೇನೆ. ವೇಗವಾಗಿ ವಾಹನ ಬಂದಿದ್ದರೆ ಸ್ಥಳದಲ್ಲಿ ಮರಣ ಹೊಂದುತ್ತಾರೆ ಅಂದರೆ, ಕೇಸಿನ ಮೇಲೆ ಅವಲಂಬನೆ ಎಂದು ಹೇಳುತ್ತಾರೆ. ನನ್ನ ತಾಯಿ ರೋಡಿನ ಗುಂಡಿಗಳಲ್ಲಿ ಬಿದ್ದು ಕೈ ಕಾಲು ಮುರಿದುಕೊಂಡಿದ್ದಾಳೆ ಅಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಹೊಟೇಲ್, ಸ್ವಿಟ ಅಂಗಡಿ, ಬೇಂದ್ರೆ ಬಸ್ ನಿಲ್ದಾಣ ಇವೆ ಅಂದರೆ ಸರಿ. ಹೇಳಿಕೆಯನ್ನು ಟೈಪ ಮಾಡಿದ ನಂತರ ನಾನು ಸಹಿ ಮಾಡಿದ್ದೇನೆ. ಪರಿಹಾರಗೋಸ್ಕರ ಸುಳ್ಳು ಕೇಸ ಮಾಡಿದ್ದೇವೆ ಅಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡಿಲ್ಲ ಅಂದರೆ ಸರಿಯಲ್ಲ. ಆರೋಪಿ ಆ ಸ್ಥಳಕ್ಕೆ ಬಂದಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.